ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಹೊನ್ನಾವರ ವಿಭಾಗ, ಹೊನ್ನಾವರ –581 334

**OFFICE OF THE DEPUTY CONSERVATOR OF FORESTS, HONAVAR DIVISION, HONAVAR-581334**

ದೂರವಾಣಿ: 08387–220235 ಫ್ಯಾಕ್ಸ ನಂ. 08387–221170

ನಂ. ಎ2/ಬಜೆಟ್/ಟೆಂಡರ್/ವಿವ–2/2019–20 ಹೊನ್ನಾವರ ದಿನಾಂಕ: 22.05.2019

**2019–20 ನೇ ಸಾಲಿಗೆ ಅರಣ್ಯ ರಕ್ಷಣೆ ಮತ್ತು ನಿರ್ವಹಣೆ ಕೆಲಸಗಳಿಗೆ ಕಾವಲುಗಾರರನ್ನು outsource (ಹೊರಗುತ್ತಿಗೆ) ಮೂಲಕ ಪಡೆಯಲು ಸಂಕ್ಷಿಪ್ತ ಅಲ್ಪಾವಧಿ ಇ–ಟೆಂಡರ್ ಕುರಿತು.**
**(ಇ–ಪ್ರೊಕ್ಯೂರಮೆಂಟ್ ಪೋರ್ಟಲ್ ಮೂಲಕ ಮಾತ್ರ)**
**(ದ್ವಿ ಲಕೋಟೆ ಸಿಸ್ಟಂ)**

ಸಾರ್ವಜನಿಕ ಅವಗಾಹನೆಗಾಗಿ ಈ ಮೂಲಕ ಪ್ರಕಟಿಸುವದೇನೆಂದರೆ, ಈ ಮುಂದೆ ಕಾಣಿಸಲಾದ ದಿನಾಂಕ ಮತ್ತು ವೇಳೆಯಲ್ಲಿ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಹೊನ್ನಾವರ ವಿಭಾಗ, ಹೊನ್ನಾವರ ಇವರ ಕಚೇರಿಯಲ್ಲಿ ಅನುಬಂಧ–1 ರಲ್ಲಿ ವಿವರಿಸಿದಂತೆ ವಲಯಗಳಲ್ಲಿ ಲಭ್ಯವಿರುವ ರಕ್ಷಣಾ ಶಿಬಿರಗಳಿಗೆ ಕಾವಲುಗಾರರ ಸೇವೆಯನ್ನು Out Source (ಹೊರಗುತ್ತಿಗೆ) ಸಂಪನ್ಮೂಲ ಏಜನ್ಸಿಯವರ ಮೂಲಕ ಪಡೆಯಲು ಸಂಕ್ಷಿಪ್ತ ಅಲ್ಪಾವಧಿ **ಟೆಂಡರ್** ಕುರಿತು ಇ–ಪ್ರೊಕ್ಯೂರಮೆಂಟ್ ಪೋರ್ಟಲ್ (https://eproc.karnataka.gov.in) ಮೂಲಕ ಟೆಂಡರ್ ಆಹ್ವಾನಿಸಲಾಗಿದೆ. ಆಸಕ್ತ ನೋಂದಾಯಿತ ಅಧಿಕೃತ ಸೇವಾ ಸಂಸ್ಥೆಯವರು ಟೆಂಡರಿನಲ್ಲಿ ಭಾಗವಹಿಸಬಹುದಾಗಿದೆ.

| | | |
|---|---|---|
| 1 | ಟೆಂಡರು ಸ್ಥಳ | ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಚೇರಿ, ಹೊನ್ನಾವರ ವಿಭಾಗ, ಹೊನ್ನಾವರ |
| 2 | ಟೆಂಡರ ಸ್ವೀಕರಿಸುವ ದಿನಾಂಕ ಮತ್ತು ವೇಳೆ | ಟೆಂಡರನ್ನು ಈ–ಪೋರ್ಟಲ್‌ನಲ್ಲಿ ತಾಂತ್ರಿಕ ಬಿಡ್‌ನ್ನು ಸಲ್ಲಿಸಲು ಕೊನೆಯ ದಿನಾಂಕ: 06–06–2019 ಅಪರಾಹ್ನ 3.00 ಗಂಟೆ<br>ಅ) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: 07–06–2019 ಅಪರಾಹ್ನ 3.30 ಗಂಟೆಗೆ. ತಾಂತ್ರಿಕ ಬಿಡ್‌ನ ಷರತ್ತುಗಳಲ್ಲಿ ಯಶಸ್ವಿಯಾಗಿದ್ದರೆ ಮಾತ್ರ ಆರ್ಥಿಕ ಬಿಡ್‌ಗಳನ್ನು ತೆರೆಯಲಾಗುವುದು. ಷರತ್ತುಗಳನ್ನು ಪೂರೈಸದ ಬಿಡ್‌ಗಳನ್ನು ತಿರಸ್ಕರಿಸಲಾಗುವುದು.<br>ಆ) ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: 10–06–2019 ಅಪರಾಹ್ನ 4.00 ಗಂಟೆಗೆ<br>ದಿನಾಂಕ: 07–06–2019 ರಂದು ಟೆಂಡರ್ ಸ್ವೀಕೃತವಾಗದೇ ಮುಂದಿನ 3 ದಿವಸಗಳ ನಂತರ ಮರು ಟೆಂಡರ್ ಇಡಲಾಗುವದು. |
| 3 | ಟೆಂಡರು ಸ್ವೀಕರಿಸುವ ಅಧಿಕಾರಿಗಳು | ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಹೊನ್ನಾವರ ವಿಭಾಗ, ಹೊನ್ನಾವರ ಇಲ್ಲವೇ ಅವರಿಂದ ನಿಯೋಜಿಸಲ್ಪಟ್ಟ ಅಧಿಕಾರಿಗಳು |

**:ಟೆಂಡರುದಾರರು ಗಮನಿಸಬೇಕಾದ ಹಾಗೂ ಇ–ಟೆಂಡರ್‌ನಲ್ಲಿ ಭಾಗವಹಿಸಲು ಇರಬೇಕಾದ ಅರ್ಹತೆಗಳು:**

1. ಟೆಂಡರು ಹಾಕುವ ಹೊರಗುತ್ತಿಗೆ ಏಜೆನ್ಸಿಯವರು ಸದ್ರಿ ಕೆಲಸಗಳಿಗೆ ಕೆಲಸಗಾರರನ್ನು ಒದಗಿಸಿ ಕೊಡಲು ತಾವು ತೆಗೆದುಕೊಳ್ಳುವ ಶುಲ್ಕವನ್ನು ಸ್ಪಷ್ಟವಾಗಿ ನಮೂದಿಸಬೇಕು.

2. ಟೆಂಡರುದಾರರು ಮಾನವ ಹೊರಸಂಪನ್ಮೂಲ ಸೇವೆಯನ್ನು ಒದಗಿಸುವ ಸಂಬಂಧ ಈ ಕೆಳಕಂಡ ಕಾಯ್ದೆಗಳ ಪ್ರಕಾರ ಕಡ್ಡಾಯವಾಗಿ ನೋಂದಣಿ ಮಾಡಿಕೊಂಡಿರಬೇಕು ಹಾಗೂ ಪ್ರತಿಯನ್ನು ಲಗತ್ತಿಸಬೇಕು.

i. ಕಾರ್ಮಿಕ ಕಾಯ್ದೆ

ii. ಆಧಾರ ಕಾರ್ಡ ಸಂಖ್ಯೆ.

iii. ಕಾರ್ಮಿಕ ಭವಿಷ್ಯ ನಿಧಿ (ಇ.ಪಿ.ಎಫ್) ಕಾಯ್ದೆ

iv. ರಾಜ್ಯ ಕಾರ್ಮಿಕ ವಿಮಾ (ಇ.ಎಸ್.ಐ) ಕಾಯ್ದೆ

v. ಆದಾಯ ತೆರಿಗೆ ಕಾಯ್ದೆ

vi. ಸೇವಾ ತೆರಿಗೆ ಕಾಯ್ದೆ

vii. PAN ಹಾಗೂ TAN ಹೊಂದಿರಬೇಕು.

viii. ಸರಕು ಮತ್ತು ಸೇವಾ ತೆರಿಗೆ ಕಾಯ್ದೆ (GST)

3. ಚಾಲ್ತಿಯಲ್ಲಿರುವ ಆದಾಯಕರ, ಮೌಲ್ಯ ಮತ್ತು ವರ್ಧಿತ ಕರ ತೀರಿಕೆ ಪ್ರಮಾಣ ಪತ್ರ ಹಾಗೂ ಹಿಂದಿನ ಎರಡು ಆರ್ಥಿಕ ವರ್ಷಗಳಲ್ಲಿ ಆದಾಯ ಮತ್ತು ನಷ್ಟದ ಬಗ್ಗೆ ಚಾರ್ಟರ್ಡ ಅಕೌಂಟಂಟ್‌ರವರಿಂದ ಆಡಿಟ್ ಮಾಡಿಸಲಾದ ಬ್ಯಾಲೆನ್ಸ್ ಶೀಟ್ ಪ್ರಮಾಣ ಪತ್ರದ ಪ್ರತಿ ಸಲ್ಲಿಸಬೇಕು.

4. ಈಗಾಗಲೇ ರಕ್ಷಣಾ ಕಾರ್ಯದಲ್ಲಿ ನೇಮಿಸಿಕೊಂಡ ದಿನಗೂಲಿ ನೌಕರರಿಗೆ ಕಡ್ಡಾಯವಾಗಿ ಇದ್ದ ಸ್ಥಳದಲ್ಲಿಯೇ ಮುಂದುವರಿಸುವುದು.

5. ಟೆಂಡರುದಾರರು ಮಾನವ ಹೊರಸಂಪನ್ಮೂಲ ಏಜೆನ್ಸಿಯಾಗಿ ವಿವಿಧ ಸಂಸ್ಥೆಗಳಿಗೆ ಕಳೆದ ಎರಡು ವರ್ಷಗಳಲ್ಲಿ ಪ್ರತಿ ವರ್ಷ ಸರಾಸರಿ 50 ಸಿಬ್ಬಂದಿಗಳನ್ನು ಒದಗಿಸಿದ ಅನುಭವ ಹೊಂದಿರಬೇಕು.

6. ಹೊರಸಂಪನ್ಮೂಲ ಏಜೆನ್ಸಿಯಾಗಿ ಮಾನವ ಸಂಪನ್ಮೂಲ ಸೇವೆಯನ್ನು ಸರ್ಕಾರಿ ಮತ್ತು ಅರೆ ಸರ್ಕಾರಿ ಇಲಾಖೆಗಳಿಗೆ ವಿಶೇಷವಾಗಿ ಅರಣ್ಯ ಇಲಾಖೆಗೆ ಅರಣ್ಯದಲ್ಲಿ, ನರ್ಸರಿಯಲ್ಲಿ ಹಾಗೂ ಕೃಷಿ–ತೋಟಗಾರಿಕೆ ಇಲಾಖೆಯಲ್ಲಿ ಕೆಲಸವನ್ನು ನಿರ್ವಹಿಸಿದ ಬಗ್ಗೆ ನುರಿತ ಮಾನವ ಸಂಪನ್ಮೂಲ ಸೇವೆಯನ್ನು ಒದಗಿಸಿದ ಬಗ್ಗೆ ನೀಡಿರುವ ವಿವರ ಮತ್ತು ದೃಢೀಕೃತ ದಾಖಲೆಗಳನ್ನು ಸಲ್ಲಿಸಬೇಕು.

7. ಟೆಂಡರುದಾರ ಸಂಸ್ಥೆಯು/ವ್ಯಕ್ತಿಯು ಕಳೆದ ವರ್ಷಗಳಲ್ಲಿ ವ್ಯವಹರಿಸಿರುವ ವಾರ್ಷಿಕ ವಹಿವಾಟುಗಳ ಮೊತ್ತ ಕನಿಷ್ಠ ಸರಾಸರಿ ರೂ. 25.00 ಲಕ್ಷ ಇರತಕ್ಕದ್ದು. ವಿವರಗಳು ಮತ್ತು ದಾಖಲೆಗಳ ಪ್ರತಿಯನ್ನು ಸಲ್ಲಿಸಬೇಕು.

8. ಟೆಂಡರುದಾರರು ಆರ್ಥಿಕವಾಗಿ ಸದೃಢರಾಗಿರಬೇಕು. ಈ ಬಗ್ಗೆ ಟೆಂಡರ್‌ಗಿಟ್ಟ ಮೊಬಲಗಿನ 30% ರಷ್ಟು ಹಣದ ಬಗ್ಗೆ ಇದೇ ಉದ್ದೇಶಕ್ಕಾಗಿ ಬ್ಯಾಂಕ್ ಸಾಲ್ವೆನ್ಸಿ ಪ್ರಮಾಣ ಪತ್ರ ದಾಖಲೆಗಳನ್ನು ಸಲ್ಲಿಸಬೇಕು.

9. ಟೆಂಡರ್ ಅಂಗೀಕರಿಸುವ ಹಾಗೂ ತಿರಸ್ಕರಿಸುವ ಅಧಿಕಾರವನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿ, ಹೊನ್ನಾವರ ವಿಭಾಗ, ಹೊನ್ನಾವರ ರವರು ಹೊಂದಿರುತ್ತಾರೆ.

10. ಮೇಲ್ಕಂಡ ಎಲ್ಲಾ ಕಾಯ್ದೆಗಳಲ್ಲಿ ನೋಂದಣಿ ಮಾಡಿದ ಬಗ್ಗೆ ನೋಂದಣಿ ಪ್ರಮಾಣ ಪತ್ರಗಳನ್ನು ದೃಢೀಕರಿಸಿ ಸಲ್ಲಿಸಬೇಕು.

11. ಟೆಂಡರ್‌ದಾರರು ಇಎಂಡಿ ಹಣವನ್ನು ಆನ್ ಲೈನ್ ಮೂಲಕವೇ ಭರಿಸುವುದು. ಪ್ರತಿ ಘಟಕಕ್ಕೆ ಪ್ರತ್ಯೇಕ ಟೆಂಡರನ್ನು e-portal ಮೂಲಕ ಸಲ್ಲಿಸತಕ್ಕದ್ದು.

12. ಟೆಂಡರು ಪ್ರಕಟಣೆಯಲ್ಲಿ ನಮೂದಿಸಿದ ಕೆಲಸಗಳ ಮಜೂರಿ ಪಾವತಿಯು ಸರ್ಕಾರದಿಂದ ಬಿಡುಗಡೆಯಾಗುವ ಅನುದಾನದ ಮಿತಿಗೆ ಒಳಪಡುತ್ತದೆ. ಹಾಗೂ ಅನುದಾನದ ನಿರೀಕ್ಷಣೆಯ ಮೇರೆಗೆ ಟೆಂಡರ ಕರೆಯಲಾಗಿರುತ್ತದೆ. ಒಂದೊಮ್ಮೆ ಗುತ್ತಿಗೆದಾರರು ಸರಬರಾಜು ಮಾಡಿದ ನೌಕರರ ಮಜೂರಿ ಪಾವತಿಗೆ ಅನುದಾನ ದೊರೆಯುವುದು ವಿಳಂಬವಾದಲ್ಲಿ ಗುತ್ತಿಗೆದಾರರು ಸರಬರಾಜು ಮಾಡಿದ ನೌಕರರ ಮಜೂರಿಯ ಮೊತ್ತದ ಮೇಲೆ ಯಾವುದೇ ರೀತಿಯ ಬಡ್ಡಿಯನ್ನು ಪಾವತಿಸಲಾಗುವುದಿಲ್ಲ.

13. ಯಾವುದೇ ಇಲಾಖೆ/ ಸಂಸ್ಥೆಯಲ್ಲಿ ಕಪ್ಪು ಪಟ್ಟಿಗೆ ಸೇರಿದ ಗುತ್ತಿಗೆದಾರರು ಟೆಂಡರಿನಲ್ಲಿ ಭಾಗವಹಿಸತಕ್ಕದ್ದಲ್ಲ. ಈ ಬಗ್ಗೆ ಸ್ವಯಂಘೋಷಣಾ ಪತ್ರವನ್ನು ಲಗತ್ತಿಸಬೇಕು.

14. ವಿವಿಧ ತರಹದ ಸೇವೆಗಳಿಗೆ ಸಂಬಂಧಿಸಿದಂತೆ ಹಾಲಿ ಇರುವ ದರದಂತೆ ಈ ಕೆಳಗಿನಂತೆ ಮಜೂರಿ ಪಾವತಿಸಬೇಕಾಗಿರುತ್ತದೆ. ಹಾಗೂ ಅನುಬಂಧ–1ರಲ್ಲಿ ನಮೂದಿಸಿದಂತೆ ಇಎಸ್ಐ ಪಿ.ಎಫ್, ಇತ್ಯಾದಿ ಕಡಿತಗೊಳಿಸಬೇಕಾಗುತ್ತದೆ.

ಕಾವಲುಗಾರರ ಬಗ್ಗೆ ಇಲಾಖಾ ದರ ರೂ. 327.72 ರಂತೆ ಪ್ರತಿ ದಿನಕ್ಕೆ.

15. ಪ್ರತಿ ತಿಂಗಳು ಮುಕ್ತಾಯಗೊಂಡ ನಂತರ ಸಂಬಂಧಪಟ್ಟ ಆಯಾ ವಲಯ ಅರಣ್ಯ ಅಧಿಕಾರಿಯವರ ಮುಖಾಂತರ ಬಿಲ್ಲನ್ನು ಹಣ ಪಾವತಿಗಾಗಿ ಸಲ್ಲಿಸುವುದು.

16. ಟೆಂಡರುದಾರರು ಮಾನವ ಸಂಪನ್ಮೂಲವನ್ನು ಒದಗಿಸಿದ ನಂತರ ಸದ್ರಿಯವರಿಗೆ ಮಾಸಿಕ ಮಜೂರಿ ಪಾವತಿಸುವಾಗ ನಿಗಧಿಪಡಿಸಿದ PF, ESI ಯನ್ನು ಕಡಿತಗೊಳಿಸಿ ಮಜೂರಿಯನ್ನು ಸಂಬಂಧಪಟ್ಟವರ ಬ್ಯಾಂಕ್ ಖಾತೆಗೆ ನೇರವಾಗಿ ಜಮಾ ಮಾಡಬೇಕು. ಹಾಗೂ PF, ESI ಯನ್ನು ಸಂಬಂಧಪಟ್ಟ ಇಲಾಖೆಗೆ ಜಮಾ ಮಾಡಬೇಕು.

17. ಟೆಂಡರುದಾರರು ಮಾನವ ಸಂಪನ್ಮೂಲವನ್ನು ಒದಗಿಸಿದ ನಂತರ ಅವರಿಗೆ ಪ್ರತಿ ತಿಂಗಳು 5 ನೇ ತಾರೀಖಿನೊಳಗಾಗಿ ಮಜೂರಿ ಪಾವತಿಸಬೇಕು ಹಾಗೂ ಈ ವಿಭಾಗದಿಂದ ಹಣವನ್ನು ಸಂದಾಯ ಮಾಡಿದ ನಂತರವೂ ಕೆಲಸಗಾರರಿಗೆ ಹಣ ಪಾವತಿಸದಿರುವುದು ಕಂಡುಬಂದಲ್ಲಿ ಯಾವುದೇ ಕಾರಣ ನೀಡದೇ ನಿಮಗೆ ನೀಡಿರುವ ಗುತ್ತಿಗೆಯನ್ನು ರದ್ದುಪಡಿಸುವ ಷರತಿಗೆ ಒಳಪಟ್ಟಿರಬೇಕು.

18. ಮೇಲ್ಕಾಣಿಸಿದ ಒಂದಕ್ಕಿಂತ ಹೆಚ್ಚಿನ ಸಂಖ್ಯೆಯ ಯುನಿಟ್‌ಗಾಗಿ ಭಾಗವಹಿಸುವವರು ತಾಂತ್ರಿಕಬಿಡ್‌ನ್ನು ಯಾವುದಾದರೂ ಒಂದು ಯುನಿಟ್‌ಗೆ ಸಲ್ಲಿಸಿದಲ್ಲಿ ಮುಂದಿನ ಎಲ್ಲಾ ಯುನಿಟ್‌ಗಳಿಗೆ ತಾಂತ್ರಿಕ ಬಿಡ್ ಪ್ರತ್ಯೇಕವಾಗಿ ಸಲ್ಲಿಸುವ ಅಗತ್ಯತೆ ಇರುವುದಿಲ್ಲ ಹಾಗೂ ಆರ್ಥಿಕ ಬಿಡ್‌ನ್ನು ಮಾತ್ರ ಪ್ರತ್ಯೇಕವಾಗಿ ಸಲ್ಲಿಸುವುದು.

19. ಟೆಂಡರನ್ನು ಹಾಗೂ ಯಶಸ್ವಿ ಟೆಂಡರುದಾರರ ಟೆಂಡರನ್ನು ಸಹ ಯಾವುದೇ ಕಾರಣಕೊಡದೆ ತಿರಸ್ಕರಿಸುವ ಅಥವಾ ಅಂಗೀಕರಿಸುವ ಹಕ್ಕನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಕಾರವಾರ ವಿಭಾಗ, ಕಾರವಾರ ರವರು ಹೊಂದಿರುತ್ತಾರೆ.

20. ಟೆಂಡರ್‌ನಲ್ಲಿ ಭಾಗವಹಿಸುವವರು ಭಾರತದ ಪ್ರಜೆಯಾಗಿರಬೇಕು ಮತ್ತು ಚುನಾವಣಾ ಆಯೋಗವು ನೀಡುವ ಗುರುತಿನ ಚೀಟಿಯನ್ನು ಹೊಂದಿರಬೇಕು.

21. ಯಶಸ್ವಿ ಟೆಂಡರುದಾರರು ಯಾವುದೇ ಕಾರಣಕ್ಕೂ ಸದ್ರಿಯವರ ಟೆಂಡರನ್ನು ಇನ್ನೊಬ್ಬರಿಗೆ ವರ್ಗಾಯಿಸಲು ಅವಕಾಶ ಇರುವುದಿಲ್ಲ.

22. ಟೆಂಡರಿನಲ್ಲಿ ಇಡಲಾದ ಕಾಮಗಾರಿಯನ್ನು ಯಾವುದೇ ಕಾರಣ ನೀಡದೇ ಟೆಂಡರು ಪ್ರಕ್ರಿಯೆಯಿಂದ ಹೊರಗಿಡುವ ಅಥವಾ ಅದಲು-ಬದಲು ಮಾಡುವ ಹಕ್ಕನ್ನು ಈ ಕೆಳ ಸಹಿದಾರರು ಕಾಯ್ದಿರಿಸಿ ಕೊಂಡಿರುತ್ತಾರೆ.

23. ಈ ಟೆಂಡರ್‌ನಲ್ಲಿ ನಮೂದಿಸಿದ ಕೆಲಸಗಳಿಗೆ ಕ್ರಿಯಾಯೋಜನೆಯಲ್ಲಿ ಮಂಜೂರಾಗುವ ಮೊತ್ತವೆ ಅಂತಿಮವಾಗಿರುತ್ತದೆ. ಇದಕ್ಕೆ ಟೆಂಡರಿನಲ್ಲಿ ಭಾಗವಹಿಸುವ ಹೊರಗುತ್ತಿಗೆದಾರ ಸಂಸ್ಥೆಯವರು ಬದ್ದರಿರಬೇಕು.

24. ಟೆಂಡರ್‌ನಲ್ಲಿ ನಮೂದಿಸಿದ ಕೆಲಸ ಕಾರ್ಯಗಳಿಗೆ ನಿಗಧಿಪಡಿಸಿದ ದರ ಮತ್ತು ಮೊತ್ತದಲ್ಲಿ ಹೆಚ್ಚು ಕಡಿಮೆ ಆಗ ಬಹುದಾಗಿದ್ದು, ಮಂಜೂರಾದ ಅಂದಾಜು ಪಟ್ಟಿಯೇ ಅಂತಿಮವಾಗಿರುತ್ತದೆ.

25. ಪ್ರಸ್ತುತ 2019-20 ನೇ ಸಾಲಿಗೆ ನಿಗದಿಪಡಿಸಿರುವ ಹೊರಗುತ್ತಿಗೆ ಕೆಲಸಗಾರರ ಸಂಖ್ಯೆಯು ಹೆಚ್ಚು ಅಥವಾ ಕಡಿಮೆ ಆಗುವ ಸಾಧ್ಯತೆ ಇರುತ್ತದೆ. ಈ ಬಗ್ಗೆ ಉಪ ಅರಣ್ಯ ಸಂರಕ್ಷಣಾಧಿಕಾರಿ, ಹೊನ್ನಾವರ ವಿಭಾಗ 'ರವರ ತೀರ್ಮಾನವೇ ಅಂತಿಮವಾಗಿದ್ದು ಅದಕ್ಕೆ ಬದ್ದರಾಗಿರತಕ್ಕದ್ದು.

26. ಕಾಮಗಾರಿಯ ವೇಳೆ ಗುತ್ತಿಗೆದಾರರು ನೇಮಿಸಿದ ಕಾರ್ಮಿಕರಿಗೆ ಯಾವುದೇ ರೀತಿ ಪ್ರಾಣಾಪಾಯ ಹಾನಿ ಉಂಟಾದಲ್ಲಿ ಅದಕ್ಕೆ ಗುತ್ತಿಗೆದಾರರೇ ಸಂಪೂರ್ಣ ಜವಾಬ್ದಾರರಾಗಿರುತ್ತಾರೆ. ಇಲಾಖೆಯು ಯಾವುದೇ ರೀತಿ ಜವಾಬ್ದಾರಿಯಾಗಿರುವುದಿಲ್ಲ.

27. ಯಶಸ್ವಿ ಟೆಂಡರುದಾರರು ಕರಾರುನಾಮೆ ಸಮಯದಲ್ಲಿ ಟೆಂಡರ್ ಮೊತ್ತದ ಶೇಕಡಾ 5% ರಷ್ಟು ಭದ್ರತಾ ಠೇವಣಿಯನ್ನು ಎಫ್‌ಡಿಆರ್/ರಾಷ್ಟ್ರೀಯ ಉಳಿತಾಯ ರೂಪದಲ್ಲಿ ಉಪ ಅರಣ್ಯ ಸಂರಕ್ಷಣಾಧಿಕಾರಿ, ಹೊನ್ನಾವರ ವಿಭಾಗ, ಹೊನ್ನಾವರ ರವರ ಹೆಸರಿನಲ್ಲಿ ಪ್ಲೆಡ್ಜ್ ಮಾಡಿ ಇಡುವುದು.

28. ಗುತ್ತಿಗೆದಾರರು ಕರಾರು ನಾಮೆಗೆ ಸಹಿ ಹಾಕಿದ ನಂತರ ಮೃತಪಟ್ಟಲ್ಲಿ ಅವರ ವಾರಸುದಾರರು ನೋಂದಾಯಿತ ಗುತ್ತಿಗೆದಾರರಾಗಿದ್ದಲ್ಲಿ ಅವರು ಸದರಿ ಕೆಲಸವನ್ನು ಮುಂದುವರೆಸಿ ಕೆಲಸಗಾರರನ್ನು ಪೂರೈಸಬಹುದಾಗಿರುತ್ತದೆ.

29. ಹೆಚ್ಚಿನ ವಿವರವನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿ, ಹೊನ್ನಾವರ ವಿಭಾಗ, ಹೊನ್ನಾವರ ರವರ ಕಚೇರಿಯ ವೇಳೆಯಲ್ಲಿ ಪಡೆದುಕೊಳ್ಳಬಹುದಾಗಿದೆ.

(ಗಣಪತಿ ಕೆ. ಭಾ.ಅ.ಸೇ)
ಉಪ ಅರಣ್ಯ ಸಂರಕ್ಷಣಾಧಿಕಾರಿ,
ಹೊನ್ನಾವರ ವಿಭಾಗ, ಹೊನ್ನಾವರ

ಅನುಬಂಧ-1

ಹೊನ್ನಾವರ ಅರಣ್ಯ ವಿಭಾಗದಲ್ಲಿ 2019-20ನೇ ಸಾಲಿನಲ್ಲಿ ಪೂರೈಸಬೇಕಾದ ಹೊರ ಸಂಪನ್ಮೂಲ ಸೇವೆಗಳ ವಿವರ

| Tender Unit No. | Range | Maintenance of Forest Protection Camps | No of camps watchers. | Wage Rate/Day | No of Days (From 01-04-2019 to 31-03-2020) | Total Amount (Rs. in lakhs) | PF Contribution (13.36%) | ESI Contribution (4.75%) | Ration @65/- per month. April 2019 | Ration @75/- per month. May 2019 to March-2020 | Total (Col 6+7+8) | EMD Amount |
|---|---|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 |
| 1 | Bhatkal | Maintenance of Forest protection Camps Nooz during 2019-20. (From: April-2019 to March-2020) | 1 | 327.72 | 365 | 1.1962 | 0.1598 | 0.0568 | 0.0195 | 0.2513 | 1.6836 | 0.042 |
| 2 | Bhatkal | -"- Nooz during 2019-20. | 1 | 327.72 | 365 | 1.1962 | 0.1598 | 0.0568 | 0.0195 | 0.2513 | 1.6836 | 0.042 |
| 3 | Bhatkal | -"- Nooz during 2019-20. | 1 | 327.72 | 365 | 1.1962 | 0.1598 | 0.0568 | 0.0195 | 0.2513 | 1.6836 | 0.042 |
| 4 | Bhatkal | -"- Nooz during 2019-20. | 1 | 327.72 | 365 | 1.1962 | 0.1598 | 0.0568 | 0.0195 | 0.2513 | 1.6836 | 0.042 |
| 5 | Honnavar | -"- Hodikeshirur.during 2019-20. | 1 | 327.72 | 365 | 1.1962 | 0.1598 | 0.0568 | 0.0195 | 0.2513 | 1.6836 | 0.042 |
| 6 | Honnavar | -"- Hodikeshirur.during 2019-20. | 1 | 327.72 | 365 | 1.1962 | 0.1598 | 0.0568 | 0.0195 | 0.2513 | 1.6836 | 0.042 |
| 7 | Honnavar | -"- Hodikeshirur.during 2019-20. | 1 | 327.72 | 365 | 1.1962 | 0.1598 | 0.0568 | 0.0195 | 0.2513 | 1.6836 | 0.042 |
| 8 | Honnavar | -"- Hodikeshirur.during 2019-20. | 1 | 327.72 | 365 | 1.1962 | 0.1598 | 0.0568 | 0.0195 | 0.2513 | 1.6836 | 0.042 |
| 9 | Gersappa | -"- Kudrigi during 2019-20. | 1 | 327.72 | 365 | 1.1962 | 0.1598 | 0.0568 | 0.0195 | 0.2513 | 1.6836 | 0.042 |
| 10 | Gersappa | -"- Kudrigi during 2019-20. | 1 | 327.72 | 365 | 1.1962 | 0.1598 | 0.0568 | 0.0195 | 0.2513 | 1.6836 | 0.042 |
| 11 | Gersappa | -"- Kudrigi during 2019-20. | 1 | 327.72 | 365 | 1.1962 | 0.1598 | 0.0568 | 0.0195 | 0.2513 | 1.6836 | 0.042 |
| 12 | Gersappa | -"- Kudrigi during 2019-20. | 1 | 327.72 | 365 | 1.1962 | 0.1598 | 0.0568 | 0.0195 | 0.2513 | 1.6836 | 0.042 |
| 13 | Kumta | -"- Hulidevarkodlu during 2019-20. | 1 | 327.72 | 365 | 1.1962 | 0.1598 | 0.0568 | 0.0195 | 0.2513 | 1.6836 | 0.042 |
| 14 | Kumta | -"- Hulidevarkodlu during 2019-20. | 1 | 327.72 | 365 | 1.1962 | 0.1598 | 0.0568 | 0.0195 | 0.2513 | 1.6836 | 0.042 |
| 15 | Kumta | -"- Hulidevarkodlu during 2019-20. | 1 | 327.72 | 365 | 1.1962 | 0.1598 | 0.0568 | 0.0195 | 0.2513 | 1.6836 | 0.042 |
| 16 | Kumta | -"- Hulidevarkodlu during 2019-20. | 1 | 327.72 | 365 | 1.1962 | 0.1598 | 0.0568 | 0.0195 | 0.2513 | 1.6836 | 0.042 |



| Tender Unit No. | Range | Maintenance of Forest Protection Camps | No of camps watchers. | Wage Rate/Day | No of Days (From 01-04-2019 to 31-03-2020) | Total Amount (Rs. in lakhs) | PF Contribution (13.36%) | ESI Contribution (4.75%) | Ration @65/- per month. April 2019 | Ration @75/- per month. May 2019 to March-2020 | Total (Col 6+7+8) | EMD Amount |
|---|---|---|---|---|---|---|---|---|---|---|---|---|
| 17 | Katgal | -"- Devimane during 2019-20. | 1 | 327.72 | 365 | 1.1962 | 0.1598 | 0.0568 | 0.0195 | 0.2513 | 1.6836 | 0.042 |
| 18 | Katgal | -"- Devimane during 2019-20. | 1 | 327.72 | 365 | 1.1962 | 0.1598 | 0.0568 | 0.0195 | 0.2513 | 1.6836 | 0.042 |
| 19 | Katgal | -"- Devimane during 2019-20. | 1 | 327.72 | 365 | 1.1962 | 0.1598 | 0.0568 | 0.0195 | 0.2513 | 1.6836 | 0.042 |
| 20 | Katgal | -"- Devimane during 2019-20. | 1 | 327.72 | 365 | 1.1962 | 0.1598 | 0.0568 | 0.0195 | 0.2513 | 1.6836 | 0.042 |

**Note: GST Will be paid including quotated Service Charges.**

Deputy Conservator of Forests,
Honnavar Division Honnavar.